# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 26-4-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಕಲುಷಿತ ವಾತಾವರಣದಿಂದ ಒರಿಸ್ಸಾದ ಕೇಂದ್ರಪ್ಪಾರ ಜಿಲ್ಲೆಯ ಕಚ್ಚಾ ಗೋಡಂಬಿ ಉತ್ಪಾದನೆ ಕುಂಠಿತ

ಮಹಾನದಿ ತೀರದ ಕಾರ್ಖಾನೆ ತ್ಯಾಜ್ಯಗಳಿಂದ ಕಲುಷಿತಗೊಂಡ ವಾತಾವರಣ ಹಾಗೂ ಹವಾಮಾನ ವೈಪರೀತ್ಯದಿಂದಾಗಿ ಒರಿಸ್ಸಾದ ಮಹಾಕಲ್ಪಾಂ, ಕೇಂದ್ರಪ್ಪಾರ ಜಿಲ್ಲೆಯ ಗೋಡಂಬಿ ಉತ್ಪಾದನೆ ತೀವ್ರ ಭಾದಿತವಾಗಿದೆಯೆನ್ನಲಾಗಿದೆ. ಗೋಡಂಬಿಯಲ್ಲದೆ ಭತ್ತ, ಮಾವು ಮುಂತಾದ ಬೆಳೆಗಳೂ ಹಾನಿಗೊಳಗಾಗಿ ಕಲುಷಿತ ವಾತಾವರಣದಿಂದ ಉತ್ಪಾದನೆ, ಇಳುವರಿ ಕಡಿಮೆಯಾಗಿದೆಯೆನ್ನಲಾಗಿದೆ. ಕಲುಷಿತ ವಾತಾವರಣದೊಂದಿಗೆ ಅಕಾಲಿಕ ಮಳೆ ಇತ್ಯಾದಿ ಹವಾಮಾನ ವೈಪರೀತ್ಯವೂ ಸೇರಿ ಕಚ್ಚಾ ಗೋಡಂಬಿ ಉತ್ಪಾದನೆ ತೀವ್ರ ಇಳಿಕೆ ಕಂಡಿದೆಯೆನ್ನಲಾಗಿದೆ.

## ಜೋಳ ದರ ಹೆಚ್ಚಳದಿಂದ ಸಂಕಷ್ಟಕ್ಕೊಳಗಾದ ಪೌಲ್ಟ್ರಿ ಕೈಗಾರಿಕೆಯಿಂದ ಕೇಂದ್ರ ಸಹಾಯಕ್ಕೆ ಮನವಿ

ಜೋಳದ ದರ ಕ್ವಿಗೆ ರೂ.18000 ದಿಂದ 25000 ಕ್ಕೆ ಹೆಚ್ಚಳವಾಗಿರುವುದರಿಂದ, ಎನ್.ಇ.ಸಿ.ಸಿ(NECC) ಕೇಂದ್ರ ಸರಕಾರದ ನೆರವು ಕೇಳಿದೆ. ಅದು ಗುಣಮಟ್ಟ ಬಾಧಿತವಾದ ಗೋಧಿ, ಭತ್ತ ಹಾಗೂ ಅಕ್ಕಿ ಕಡಿ ಸೇರಿ 2 ಮಿಲಿಯನ್ ಟನ್‌ಗಳಷ್ಟು ಪರ್ಯಾಯವಾಗಿ ಸಹಾಯವನ್ನು ಕೇಳಿದೆ. ಜೋಳ ದರ ಹೆಚ್ಚಳದಿಂದ ಪೌಲ್ಟ್ರಿ ವಲಯ ಪಕ್ಷಿ ಆಹಾರ ತಯಾರಿಕೆಗೆ ಹಾಗೂ ಬಳಕೆಗೆ ಹೆಚ್ಚು ವ್ಯಯಿಸಬೇಕಾಗಿದೆಯೆನ್ನಲಾಗಿದೆ.

## ಇಂಡೋನೇಶಿಯಾದ ರಫ್ತು ನಿರ್ಬಂಧ ಕಚ್ಚಾ ಪಾಮೆಣ್ಣೆಗೆ ಅನ್ವಯವಲ್ಲ

ಇಂಡೋನೇಶಿಯಾದ ಪಾಮೆಣ್ಣೆ ರಫ್ತು ನಿರ್ಬಂಧ ರಿಫೈಂಡ್ ಪಾಮೆಣ್ಣೆಗೆ ಮಾತ್ರ ಅನ್ವಯ(RBD) ಕಚ್ಚಾ ಪಾಮೆಣ್ಣೆ ರಫ್ತಿಗೆ ಅನ್ವಯಿಸುವುದಿಲ್ಲವೆಂದು ಇಂಡೋನೇಶಿಯಾ ಸ್ಪಷ್ಟೀಕರಣ ನೀಡಿದೆಯೆನ್ನಲಾಗಿದೆ. ಇದರಿಂದ ಭಾರತೀಯ ರಿಫೈನ್‌ರಿಗಳ ಕಚ್ಚಾ ಪಾಮೆಣ್ಣೆ ಇಂಡೋನೇಶೀಯಾದಿಂದ ಆಮದು ಮಾಡಬಹುದಾಗಿದ್ದು, ಭಾರತೀಯ ರಿಫೈನರಿಗಳಿಗೆ ಲಾಭದಾಯಕವೆನ್ನಲಾಗಿದೆ. ಈ ಸ್ಪಷ್ಟೀಕರಣದ ನಂತರ ಮಲೇಶೀಯನ್ ಕಚ್ಚಾ ಪಾಮೆಣ್ಣೆ ಫ್ಯೂಚರ್ ದರ ಇಳಿಕೆಯಾಗಿದೆ.

## ಬಿಹಾರದ ಕೋಷಿ ವಲಯದಲ್ಲಿ ಬಿರುಗಾಳಿ ಮಳೆಯಿಂದ ಜೋಳ ಬೆಳೆಗೆ ಅಪಾರ ಹಾನಿ

ಬಿಹಾರದ ಕೋಷಿ ಹಾಗೂ ಸೀಮಾಂಚಲ ವಲಯಗಳಲ್ಲಿ ಬಿರುಗಾಳಿ ಮಳೆಯಿಂದ ಜೋಳ ಬೆಳೆ ಅಪಾರ ಹಾನಿಗೊಳಗಾಗಿದೆಯೆನ್ನಲಾಗಿದೆ. ಇದರಿಂದ ಬಂಪರ್ ಉತ್ಪಾದನೆಯ ನಿರೀಕ್ಷೆಯಲ್ಲಿದ್ದ ರೈತರಿಗೆ ಅಪಾರ ನಷ್ಟವಾಗಿದ್ದು ಉತ್ಪಾದನೆ ಇಳಿಕೆಯಾಗಬಹುದಾಗಿದೆ. ಅಲ್ಲದೆ ಇತರ ಹಲವಡೆ ಕೀಟಗಳ (Armyworms) ಹಾವಳಿಯಿಂದ ಬೆಳೆ ನಾಶವಾಗಿದೆಯೆನ್ನಲಾಗಿದೆ. ಉತ್ಪಾದನೆ ಇಳಿಕೆಯಿಂದ ದರ ಹೆಚ್ಚಳದಲ್ಲೇ ಮುಂದುವರಿಕೆಗೆ ಕಾರಣವಾಗುವ ಸಾಧ್ಯತೆಯಿದೆ.

## ಜೋಳ ಆವಕ ಹೆಚ್ಚಿದ್ದರೂ ಸಗಟು ಬೇಡಿಕೆ ಹೆಚ್ಚಳದಿಂದ ದರ ಹೆಚ್ಚಳ

ದೇಶದಾದ್ಯಂತ ಪೂರೈಕೆ ಹೆಚ್ಚಳವಿದ್ದರೂ ಸಗಟು ಪ್ರಯಾಣದ ಬೇಡಿಕೆ ಹೆಚ್ಚಳದಿಂದ ಜೋಳ ದರ ಹೆಚ್ಚಳವಾಗಿದೆ. ಮುಂಬರುವ ದಿನಗಳಲ್ಲಿ ಆವಕ ಮತ್ತೂ ಹೆಚ್ಚಳವಾಗುವ ಸಂಭವವಿದೆ. ಆವಕ ಹೆಚ್ಚಾಗುವುದರಿಂದ ದರ ಇಳಿಕೆಯಾಗುವ ಸಾಧ್ಯತೆಯಿದೆ. ರಫ್ತು ಬೇಡಿಕೆಯೂ ಉತ್ತಮವಿರುವುದರಿಂದ ದರ ಇಳಿಕೆ ಸೀಮಿತವಾಗುವ ಸಾಧ್ಯತೆಯಿದೆ.